ಹೆಮ್ಮೆಯಿಂದ ಹೇಳುತ್ತಿದ್ದರು. ಅವರ ತಂಗಿ ಸುಲಭಾ ಮನಸ್ಸು ಮಾಡಿದ್ದರೆ ಬರಹಗಾರ್ತಿಯಾಗಿ ಬೆಳೆಯಬಹುದಾಗಿತ್ತು ಎಂಬ ಕೊರಗು ಅವರಲ್ಲಿತ್ತು.

ಮುಕುಂದ ಬಲು ಹಿಂದೆ ಎಪ್ಪತ್ತರ ದಶಕದಲ್ಲಿ "ಸಂಕ್ರಮಣ"ದಲ್ಲಿ ಒಂದೆರಡು ಕವಿತೆಗಳನ್ನು ಪ್ರಕಟಿಸಿದ್ದರು. ಆಗಲೇ ಹೇಳಿದಂತೆ ಅನುವಾದಗಳನ್ನು ಮಾಡುತ್ತಲೇ ಇರುತ್ತಿದ್ದರು. ಎಲ್ಲೂ ಕಳಿಸುವುದು ಅವರಿಗೆ ಇಷ್ಟೆಯ ವಿಷಯವಾಗಿರಲಿಲ್ಲ. ನಾವೆಲ್ಲ ಎಳೆಯರು ಪಂಪು ಹೊಡೆದ ಮೇಲೆ ಒಂದೆರಡು ಕಥೆಗಳನ್ನು ಬರೆದರು. ನಮ್ಮ ಹಕ್ಕೊತ್ತಾಯಕ್ಕೆ ಮಣಿದು 'ಮಯೂರ', 'ಪ್ರಜಾವಾಣಿ'ಗಳಿಗೆ ಕಳಿಸಿದರು. ಅವು ಪ್ರಕಟವಾಗಿ ತುಂಬಾ ಒಳ್ಳೆಯ ಪ್ರತಿಸ್ಪಂದನ ಬಂತು. ಅಂದರೆ ಅವರು ತಮ್ಮ ನಾಲ್ವತ್ತನೇ ವಯಸ್ಸಿನ ನಂತರವೇ ಕಥೆಗಳನ್ನು ಬರೆದದ್ದು. ಆಗ ಬೆಂಗಳೂರಿನಿಂದ ಕೇಶವ ಮಳಗಿ, ವಿವೇಕ ಶಾನಭಾಗ, 'ಆನಂದ'ದಿಂದ (ಎರಡೂ ಅರ್ಥದಲ್ಲಿ) ಶ್ರೀರಾಮ್ ಎಲ್ಲರೂ ಅವರನ್ನು ಹುರಿದುಂಬಿಸಿ, ಅವರು ಇನ್ನೂ ಬರೆದರು. ಗೆಳೆಯ ಕೇಶವ ಮಳಗಿ ಮತ್ತವರ ಉತ್ಸಾಹಿ ಸ್ನೇಹಿತರು ಮುಂದಾಗಿ ಅವರ "ಒಂದು ಸಂಜೆ ಬೆಳಗಾದಾಗ" (ಕಲ್ಯಾಣಿ ಪ್ರಕಾಶನ, 1990) ಎಂಬ ಕಥಾಸಂಕಲನವನ್ನು ಪ್ರಕಟಿಸಿದರು. ಬೆಂಗಳೂರಿನಲ್ಲಿ 20.8.1990ರಂದು ಬಿಡುಗಡೆ ಇತ್ತು. ಅದಕ್ಕಾಗಿ ನಾನು ಮತ್ತು ಮುಕುಂದ ಬೆಂಗಳೂರಿಗೆ ರೈಲಿನಲ್ಲಿ ಪಯಣಿಸಿದೆವು. ಅದೊಂದು ಅವಿಸ್ಮರಣೀಯ ಸಹ ಪ್ರವಾಸ. ದಣಿವಿರದ ಉಸ್ಫೂರ್ತ ಮಾತುಗಳು. ಶೋಲಾಪುರ ನಿಲ್ದಾಣ ದಾಟಿದಾಗ ಮುಸ್ಸಂಜೆ. ನಾವಿಬ್ಬರೂ ಬೋಗಿಯ ಬಾಗಿಲು ತೆಗೆದು ಮೆಟ್ಟಿಲ ಮೇಲೆ ಕಾಲಿಟ್ಟು ಅಕ್ಕಪಕ್ಕ ಕುಳಿತೆವು. ವಿಲಕ್ಷಣವಾದ ಸಂಜೆ ಬೆಳಕು ಇತ್ತು. ಇಬ್ಬರೂ ಅದನ್ನು ಕೈಲಿ ಹಿಡಿಯುವವರಂತೆ ಎರಡೂ ಹಸ್ತಗಳನ್ನೂ ಅರಳಿಸಿ ಹಿಡಿದಿದ್ದೆವು. "ನೋಡ್ರಿ ಈ ಬೆಳಕಿನಲ್ಲಿ ನಮ್ಮದೇ ಹಸ್ತಗಳು ಹ್ಯಾಗ್ ಬ್ಯಾರೆ ಕಾಣಸ್ತಾವ ನೋಡ್ರಿ" ಎಂದು ನಮ್ಮವೇ ಅಂಗೈಗಳನ್ನು ಮುಗ್ಧರಂತೆ ನೋಡಿದೆವು. ಆ ವಿಲಕ್ಷಣ ಕ್ಷಣ, ನಮ್ಮಿಬ್ಬರನ್ನು ನಂತರ ಎಂದೂ ಬಿಟ್ಟು ಹೋಗಲಿಲ್ಲ.

ಅವರ ಆ ಪುಸ್ತಕಕ್ಕೆ ಅವರ ಹಕ್ಕೊತ್ತಾಯದ ಮೇಲೆ ನಾನು ಬ್ಲರ್ಬ್ ಬರೆದಿದ್ದೆ. ಈ ಬಗ್ಗೆ ನಮ್ಮ ನಡುವೆ ಒಂದು ಜೋಕ್ ಇತ್ತು. ಏನೆಂದರೆ ಆ ಪುಸ್ತಕ ಮುದ್ರಣ ಶುರುವಾಗುವ ಹಂತದಲ್ಲಿದೆ ಎಂದು ತಿಳಿದು ಅಜಿತ್ ಪಂಜಾಬ್‌ನಲ್ಲಿ ಸೇರಿ ನಾವು ಬೀರೋಚಿತವಾಗಿ ಸಿಲೆಬ್ರೇಟ್ ಮಾಡುವಾಗ, ಅವರು ಚೂರು ತೊದಲುತ್ತ, "ಈ ಪುಸ್ತಕ ಯಾವಾಗರೆ ಬರ್ಲಿ, ಅದಕ್ಕೆ ಬಲ್ಬ್ ಮಾತ್ರ ನೀವೇ ಬರೀಬೇಕ್ರಿ" – ಎಂದರು. ಅಂದಿನಿಂದ ಬ್ಲರ್ಬ್ ಪದಕ್ಕೆ ಪರ್ಯಾಯವೆಂಬಂತೆ ನಾವು ಬಲ್ಬ್ ಎಂದೇ ಬಳಸುತ್ತಿದ್ದೆವು, ಎಷ್ಟು ಕ್ಯಾಂಡಲಿಂದು ಇತ್ಯಾದಿ ವಿವರಗಳೊಂದಿಗೆ. ಯಾವುದಾದರೂ ಹೊಸ ಪುಸ್ತಕದ ಹಿನ್ನುಡಿಯಲ್ಲಿ ಹುರುಳಿಲ್ಲದಿದ್ದರೆ, "ಝೀರೋ ಕ್ಯಾಂಡಲ್ ಬಲ್ಬ್‌ರೀ" ಅಂತಿದ್ರು. ಈ ಪುಸ್ತಕ ಬಿಡುಗಡೆಯ ಸಂದರ್ಭಕ್ಕೆ ಇನ್ನೂ ಒಂದೆರಡು ವಿಶೇಷ ಖುಷಿಗಳ ಮೆರುಗು ಇತ್ತು. ಒಂದು : ವಿವೇಕ ಅನುರಾಧಾರ ಮದುವೆಯೂ ಒಂದು ದಿನ ಮುಂಚೆ ಇತ್ತು. ಇನ್ನೊಂದು : ಈ ಪುಸ್ತಕದ ಜೊತೆ ನಮ್ಮೆಲ್ಲರ ಆರಾಧ್ಯ ಕವಿ ಕೆ.ವಿ. ತಿರುಮಲೇಶರ ಮೊದಲ ಕಥಾಸಂಕಲನ "ಜಾಗುವಾ ಮತ್ತು ಇತರರು" – ಸಹ ಬಿಡುಗಡೆಗೊಳ್ಳುವುದಿತ್ತು. ಹೀಗಾಗಿ ಮಾತಿಗೆ ಮೀರಿದ ಉಲ್ಲಾಸವೊಂದು ಅಲೆ ಅಲೆಯಾಗಿ ಉಕ್ಕುತ್ತಿತ್ತು. 20.8.1990ರಂದು ಮಧ್ಯಾಹ್ನ ಎಂ.ಜಿ. ರೋಡ್‌ನ ಅಡ್ಡರಸ್ತೆಯೊಂದರಲ್ಲಿದ್ದ ಓಕನ್ ಕಾಸ್ಕ್ ಎಂಬ ಮಧುಶಾಲೆ ಒಂದರಲ್ಲಿ ಮದುಮಕ್ಕಳಿಗೆ ಶುಭಕೋರಲು ಶ್ರೀರಾಮ, ತಿರುಮಲೇಶ್, ರಾಮಚಂದ್ರ ಶರ್ಮ, ಎಚ್.ಕೆ. ಅನಂತರಾವ್ ('ಅಂತ' ಖ್ಯಾತಿಯ ಲೇಖಕ. ಅವರನ್ನು ಅಂತ ರಾವ್ ಎಂದು ಶ್ರೀರಾಮ ಕರೀತಿದ್ದ) ಜೊತೆ ಸೇರಿದ್ದೆವು. ಆಗಷ್ಟೇ ಬೆಂಗಳೂರು ಡ್ರಾಟ್ ಬೀಯರಿಗೆ ಹೆಸರುವಾಸಿಯಾಗಿತ್ತು. ಸಂಜೆ ಪುಸ್ತಕ ಬಿಡುಗಡೆ ಇದೆ ಎಂದು ಬಲ್ಬ್‌ಧಾರಿಯಾದ ನಾನೇ ಎಲ್ಲರನ್ನೂ ಆಗಾಗ ಎಚ್ಚರಿಸುತ್ತಿದ್ದೆ. ಶರ್ಮರ ಚಾಟೂಕ್ತಿಗಳನ್ನು ತಿರುಮಲೇಶರ ಮಾತುಗಳನ್ನು